



















ಮಾತ್ರ ಸೀಮಿತವಾಗಿತ್ತು. ಅಂಟು ಇರುವ ತಲೆಚೀಟಿಗಳನ್ನು ಲಕೋಟೆಗಳಿಗೆ ಹಚ್ಚುವ ರೂಢಿ ಇತ್ತು. ಇದು ಕೂಡ ಸಾಮಾನ್ಯರ ಕೈಗೆ ಎಟುಕುತ್ತಿರಲಿಲ್ಲ.

ಆಮೇಲೆ ಬಂದಿದ್ದೇ ಸಚಿತ್ರ ಅಂಚೆ ಕಾರ್ಡ್. ತಾವು ನೋಡಿದ, ಹೋಗಿಬಂದ ಸ್ಥಳ–ಚಿತ್ರ ಇರುವ, ಸಂಕ್ಷಿಪ್ತ ವಿವರಣೆ ಕೊಡಬಹುದಾದ ಕಡಿಮೆ ಖರ್ಚಿನ ಸಚಿತ್ರ ಅಂಚೆ ಕಾರ್ಡುಗಳು ಬಹುಬೇಗ ಜನಪ್ರಿಯವಾದವು.

ವಿದೇಶಗಳಲ್ಲಿ ಹೆಚ್ಚು ಉಪಯೋಗವಾಗುತ್ತಿದ್ದ ಸಚಿತ್ರ ಅಂಚೆ ಕಾರ್ಡುಗಳು ಮೈಸೂರಿನಲ್ಲಿ ಬಳಕೆಗೆ ಬಂದಿದ್ದು 1900ರ ಸುಮಾರಿಗೆ. ಹೊಸ ಸಂಶೋಧನೆಗಳಿಂದ ಸಿಕ್ಕ ಪ್ರತಿಫಲವನ್ನು ತಾವೂ ಅಳವಡಿಸಿಕೊಳ್ಳಬೇಕೆಂಬುದು ಆಗಿನ ಮೈಸೂರು ಒಡೆಯರ್ ಆಳ್ವಿಕೆಯ ಮನೋಧರ್ಮವಾಗಿತ್ತು. ಹೀಗಾಗಿ ವಿದ್ಯುತ್, ಮೋಟಾರು ವಾಹನಗಳು, ಕ್ಯಾಮೆರಾಗಳೂ ಆಗಲೇ ಮೈಸೂರಿಗೆ ಬಂದಿದ್ದವು. ಆಧುನಿಕ ಅಂಚೆ ವ್ಯವಸ್ಥೆ ಜಾರಿಗೆ ಬರುವ ಮೊದಲೇ ಮೈಸೂರು ಪ್ರಾಂತ್ಯದಲ್ಲಿ 'ಮೈಸೂರು ಅಂಚೆ' ಎಂಬ ಅಂಚೆ ವ್ಯವಸ್ಥೆ ಜಾರಿಯಲ್ಲಿತ್ತು.

ಆಕರ್ಷಕವಾದ ಅರಮನೆಗಳು, ಸುಂದರ ವೀಕ್ಷಣಾ ತಾಣಗಳು, ಭವ್ಯ ದಸರಾ ಆಚರಣೆ, ದೇಶವಿದೇಶಗಳಲ್ಲಿ ಮೈಸೂರು ಪ್ರಸಿದ್ಧವಾಗಲು, ಪ್ರವಾಸಿ ಕೇಂದ್ರವಾಗಲು ಪಿಕ್ಚರ್ ಕಾರ್ಡ್‌ಗಳ ಕೊಡುಗೆಯೂ ಇದೆ.